ಕರ್ನಾಟಕ ವಿದ್ಯುತ್ ನಿಗಮದಿಂದ ಸಂದಾಯ.

203(908) ಶ್ರೀ ಅರಗ ಜ್ಞಾನೇಂದ್ರ (ತೀರ್ಥಹಳ್ಳಿ) :— ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಕರ್ನಾಟಕ ವಿದ್ಯುತ್ ನಿಗಮದಿಂದ ಚಕ್ರಾ ಮತ್ತು ವರಾಹಿ ಯೋಜನಾ ಪ್ರದೇಶದ ಸಂತ್ರಸ್ಥರಿಗೆ ಕೋರ್ಟಿನ ಆದೇಶದಂತೆ ಕೊಡಬೇಕಾದ ಬಾಕಿ ಹಣ ಎಷ್ಟು

ಆ) ಈ ಬಗ್ಗೆ ಶಿವಮೊಗ್ಗ ಭೂ ಸ್ವಾಧೀನ ಅಧಿಕಾರಿಯವರು ವಿದ್ಯುತ್ ನಿಗಮಕ್ಕೆ ಎಂದು ಪತ್ರ ಬರೆದಿದ್ದಾರೆ;

ಇ) ಹಣ ಜಮಾ ಮಾಡಲು ವಿಳಂಬವಾಗುವುದಕ್ಕೆ ಕಾರಣಗಳೇನು ಮತ್ತು ಎಂದು ಅದನ್ನು ಜಮಾ ಮಾಡಲಾಗುವುದು?

ಶ್ರೀ ಶರಣ ಬಸಪ್ಪ ದರ್ಶನಾಪುರ (ಇಂಧನ ರಾಜ್ಯ ಸಚಿವರು) :—

ಅ) ಶಿವಮೊಗ್ಗ ಭೂ ಸ್ವಾಧೀನಾಧಿಕಾರಿಯವರು ಕರ್ನಾಟಕ ವಿದ್ಯುತ್ ನಿಗಮಕ್ಕೆ ಸಲ್ಲಿಸಿರುವ ಬೇಡಿಕೆಯನುಸಾರ ಸಾಗರ ನ್ಯಾಯಾಲಯವು 88 ಪ್ರಕರಣಗಳಲ್ಲಿ ಹೊರಡಿಸಿರುವ ಡಿಕ್ರಿಯನುಸಾರ ರೂ. 49.49 ಲಕ್ಷ ಪರಿಹಾರ ನೀಡಬೇಕಿದೆ.

ಆ) ದಿನಾಂಕ: 2-11-1998 ರಂದು.

ಇ) ದಿನಾಂಕ: 2-11-1998 ರ ಪತ್ರದ ಮೇಲೆ ವಿವರಗಳನ್ನು ಕೇಳಲಾಗಿ ಭೂ ಸ್ವಾಧೀನಾಧಿಕಾರಿಯವರು ದಿನಾಂಕ: 20-2-1999 ರಂದು ವಿವರಣೆ ನೀಡಿರುತ್ತಾರೆ. ಈ ಮಧ್ಯೆ ನಿಗಮವು ದಿನಾಂಕ: 17-2-1998 ರಂದು ರೂ. 10 ಲಕ್ಷ ಮತ್ತು ವಿವರಣೆ ದೊರತ ನಂತರ ದಿನಾಂಕ: 20-3-1999 ರಂದು ರೂ. 40 ಲಕ್ಷ ಹೀಗೆ ಒಟ್ಟು ರೂ. 50 ಲಕ್ಷ ಹಣವನ್ನು ಬಿಡುಗಡೆ ಮಾಡಿದೆ. ನಿಗಮದಿಂದ ವಿಳಂಬವಾಗಿಲ್ಲ.

ಶ್ರೀ ಅರಗಜ್ಞಾನೇಂದ್ರ :— ಮಾನ್ಯ ಅಧ್ಯಕ್ಷರೇ, ನನ್ನ ಕ್ಷೇತ್ರದ ವರಾಹಿ ಮುಳುಗಡೆ ಯೋಜನಾ ಪ್ರದೇಶದಲ್ಲಿ, ಜಮೀನು ಮತ್ತು ಮನೆ ಕಳೆದುಕೊಂಡಿರತಕ್ಕಂಥ ರೈತರು ಪರಿಹಾರವನ್ನು ಪಡೆಯುವುದಕೋಸ್ಕರ ಕೋರ್ಟಿಗೆ ಹೋಗಿ ಡಿಕ್ರಿ ಆದರೂ ಕೂಡ ಎರಡೆರಡು ವರ್ಷಗಳು ಆದರೂ ಕೂಡ ಪರಿಹಾರದ ಹಣವನ್ನು ವಿದ್ಯುತ್ ನಿಗಮ ಪಾವತಿ ಮಾಡುತ್ತಿಲ್ಲ. ಉದಾಹರಣೆಗೆ ನೀವು ಕೊಟ್ಟಂತಹ ಉತ್ತರದಲ್ಲಿಯೇ ಇದೆ. 2-11-98 ರಲ್ಲಿ ಭೂ ಸ್ವಾಧೀನಾಧಿಕಾರಿಗಳು, ಶಿವಮೊಗ್ಗ ಇವರು ಕೆ.ಪಿ.ಸಿ.ಗೆ ಪತ್ರವನ್ನು ಬರೆಯುತ್ತಾರೆ. ನಾನು ಈ ಪ್ರಶ್ನೆ ಹಾಕಿದ ಮೇಲೆ 20-3-99ರಂದು 40 ಲಕ್ಷ ರೂಪಾಯಿಗಳನ್ನು ಭೂಸ್ವಾಧೀನಾಧಿಕಾರಿಗಳಿಗೆ ಪಾವತಿ ಮಾಡಿದ್ದಾರೆ. ಈ ರೀತಿ ವಿಳಂಬ ಮಾಡಿ ಕೊಟ್ಟುವುದರಿಂದಾಗಿ ಜಮೀನು ಮತ್ತು ಮನೆ ಕಳೆದುಕೊಂಡಿರತಕ್ಕಂಥ ರೈತರು ಬಡಿದು ಬಡಿದು ಅಕ್ಷರಶಃ ಅಲೆಮಾರಿಯಾಗಿದೆ ಅವರು ಬೀದಿಪಾಲಾಗುತ್ತಿದ್ದಾರೆ. ಇನ್ನೂ ಕೂಡ ಹಣ ಪಾವತಿ ಮಾಡುವುದಾದ್ದು ಸಾಕಷ್ಟು ಇದೆ. ಸಂಪೂರ್ಣವಾಗಿ ಆ ಹಣ ಕೊಟ್ಟುವುದಕ್ಕೆ ತಾವು ಏನು ಕ್ರಮ ತೆಗೆದುಕೊಳ್ಳುತ್ತೀರಿ?

ಶ್ರೀ ಶರಣಬಸಪ್ಪ ದರ್ಶನಾಪುರ್ :— ಮಾನ್ಯ ಅಧ್ಯಕ್ಷರೇ, ವರಾಹಿ ಮತ್ತು ಚಕ್ರ ಯೋಜನೆ ಅಡಿಯಲ್ಲಿ ಕೋರ್ಟಿನಲ್ಲಿರತಕ್ಕಂಥ ಕೇಸ್‌ಗಳು ನಮ್ಮ ವಿದ್ಯುತ್ ನಿಗಮಕ್ಕೆ ಬಂದಿದ್ದು 2-11-98 ರಂದು, ಇಷ್ಟು ದುಡ್ಡು ನೀವು ಕಟ್ಟಬೇಕೆಂದು ಬಂದಿತ್ತು ಅದೇ ಪ್ರಕಾರವಾಗಿ ನಾವು ಒಂದು ಲೆಟರ್ ಆಫ್ ಕ್ಲಾರಿಫಿಕೇಶನ್ ಕೇಳಿದ್ದೆವು. ಸುಮಾರು ಎರಡು ತಿಂಗಳು ಆದ ಮೇಲೆ ಅಲೆಟರ್‌ಗೆ ಕ್ಲಾರಿಫಿಕೇಶನ್ಸ್ ಬಂತು. ಅದು ಬಂದ ತಕ್ಷಣ ಸುಮಾರು 50 ಲಕ್ಷ ರೂಪಾಯಿಗಳನ್ನು ತುಂಬುವ ವ್ಯವಸ್ಥೆ ಮಾಡುತ್ತೇವೆ.

ಶ್ರೀ ಅರಗಜ್ಞಾನೇಂದ್ರ :— ಮಾನ್ಯ ಅಧ್ಯಕ್ಷರೇ, ಈಗಾಗಲೇ ಡಿಕ್ರಿಯಾಗಿರತಕ್ಕಂಥ ಕೇಸ್‌ಗಳಿಗೆ ಮತ್ತು ಅಲ್ಲಿರತಕ್ಕಂಥ ಕೃಷಿ ಕಾರ್ಮಿಕರಿಗೆ ಒಂದು ಕೋಟಿ ರೂಪಾಯಿಗಳಿಗೂ ಹೆಚ್ಚು ಹಣವನ್ನು ನೀವು ತುಂಬಬೇಕಾಗಿದೆ. ಭೂ ಸ್ವಾಧೀನಾಧಿಕಾರಿಗಳು ಎರಡು ಪತ್ರಗಳನ್ನು ಬರೆದಿದ್ದಾರೆ 1 ಕೋಟಿ 25 ಲಕ್ಷ ರೂಪಾಯಿಗಳನ್ನು ಕಟ್ಟಬೇಕೆಂದು ಒಂದು ಪತ್ರ, ಇನ್ನೊಂದು ಪತ್ರ ತುರ್ತಾಗಿ ಮೇಜು ಕುರ್ಚಿ ಜಪ್ತಿ ಮಾಡುತ್ತಿದ್ದಾರೆ ಕೋರ್ಟ್, ತಕ್ಷಣ ಇಷ್ಟು ಹಣ ಕಟ್ಟಬೇಕಾಗಿದೆ ಎಂದು ಅದಕ್ಕಾಗಿ ಇಷ್ಟು ಹಣ ಕಟ್ಟಿದ್ದೀರಿ ಉಳಿದಿರತಕ್ಕಂಥ ಹಣ ಇನ್ನೂ ಪಾವತಿಯಾಗಬೇಕಾಗಿದೆ. ತಮ್ಮ ಹತ್ತಿರ ಮಾಹಿತಿ ಇದೆಯೋ ಇಲ್ಲವೋ ಗೊತ್ತಿಲ್ಲ. ಆದರೆ, ನಾನು ವಿದ್ಯುತ್ ನಿಗಮದ ಅಧಿಕಾರಿಗಳ ಹತ್ತಿರ ಕೇಳಿದಾಗ ಹೇಳುತ್ತಾರೆ ಕೆ.ಇ.ಬಿ.ಯವರು ನಮಗೆ ಒಂದು ಸಾವಿರ ಕೋಟಿ ರೂಪಾಯಿಗಳನ್ನು ತುಂಬಬೇಕಾಗಿದೆ ನಮ್ಮ ವಿದ್ಯುತ್ ನಿಗಮದಲ್ಲಿ ಹಣ ಇಲ್ಲ ನಾನೇನು ಮಾಡುವುದು ಎಂದು ಹೇಳುತ್ತಿದ್ದಾರೆ ನೀವು ಎರಡೂ ಇಲಾಖೆಗಳನ್ನು ಹೊಂದಿರತಕ್ಕಂಥ ಮಂತ್ರಿಗಳು ತಾವು, ಕೆ.ಇ.ಬಿ.ಯಿಂದ ಕೆ.ಪಿ.ಸಿ.ಗೆ ಹಣವನ್ನು ತುಂಬಿಸುತ್ತೀರಾ? ನಮ್ಮ ಮುಳುಗಡೆ ರೈತರ ಪರಿಹಾರ ಹಣವನ್ನು ಕಟ್ಟಿಸುತ್ತೀರಾ? ಯಾವಾಗ ಮಾಡುತ್ತೀರಿ?

ಶ್ರೀ ಶರಣಬಸಪ್ಪ ದರ್ಶನಾಪುರ :— ಮಾನ್ಯ ಅಧ್ಯಕ್ಷರೇ, ಎರಡನೆಯ ಪತ್ರದ ಬಗ್ಗೆ ನನಗೆ ಮಾಹಿತಿ ಇಲ್ಲ ನಮಗೆ ಇದ್ದಂತಹ ಮಾಹಿತಿ ಸುಮಾರು 50 ಲಕ್ಷ ರೂಪಾಯಿ ಕೋರ್ಟಿನಿಂದ ಡಿಕ್ರಿಯಾಗಿ ಬಂದಿದೆ ಅದನ್ನು ತುಂಬಬೇಕು ಎಂದು ಹೇಳಿದರು ಅದನ್ನು ನಾವು ಈಗಾಗಲೇ ತುಂಬಿದ್ದೇವೆ. ಎರಡನೇ ಪತ್ರ ಒಂದು ಕೋಟಿ 25 ಲಕ್ಷದ ಬಗ್ಗೆ ಹೇಳಿದ್ದಾರೆ ನಾನು ಇವತ್ತೇ ಅದನ್ನು ತರಿಸಿ ನೋಡುತ್ತೇನೆ. ಒಂದು ವಾರ ಅಥವಾ 15 ದಿವಸದಲ್ಲಿ ದುಡ್ಡು ತುಂಬುವ ವ್ಯವಸ್ಥೆ ಮಾಡಿಸುತ್ತೇನೆ.

ದಕ್ಷಿಣ ರೈಲ್ವೆ ಇಲಾಖೆಯ ಫ್ರೇಜರ್ ಟೌನ್ ಪೊಲೀಸ್ ಠಾಣೆ ಎದುರಾದ ಸೇತುವೆಯ ಹಾಮಗಾರಿ

205(1021) ಶ್ರೀ ಎನ್. ರಾಜಣ್ಣ (ಭಾರತೀನಗರ) :— ಮಾನ್ಯ ಬೆಂಗಳೂರು ನಗರಾಭಿವೃದ್ಧಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ದಕ್ಷಿಣ ರೈಲ್ವೆ ಇಲಾಖೆಯ ಫ್ರೇಜರ್‌ಟೌನ್ ಪೊಲೀಸ್ ಠಾಣೆ ಎದುರು ರೈಲ್ವೆ ಕೆಳಸೇತುವೆ ಆಗಲಗೊಳಿಸಲು ಲೋಕೋಪಯೋಗಿ ಇಲಾಖೆಯಿಂದ ನಕ್ಷೆ ಮತ್ತು ವಿನ್ಯಾಸಗಳನ್ನು ಒದಗಿಸುವಂತೆ ಲೋಕೋಪಯೋಗಿ ಇಲಾಖೆಯನ್ನು ಕೋರಿದೆಯೇ?

ಅ) ಹಾಗಿದ್ದಲ್ಲಿ ಸರ್ಕಾರವು ಈ ಬಗ್ಗೆ ಯಾವ ಕ್ರಮ ತೆಗೆದುಕೊಂಡಿರುತ್ತದೆ?